182(365) ಶ್ರೀ ಸಿಂಧೂರ ಜಿ. ರಾಜಶೇಖರ್ (ಶಿಗ್ಗಾಂವ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಆಗ್ರೋ ಪಾರ್ಕ್ ಇಲ್ಲದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆಗ್ರೋ ಪಾರ್ಕ್ ಮಾಡಲು ಸರಕಾರ ಯಾವಾಗ ಕ್ರಮ ಕೈಗೊಳ್ಳುವುದು;

ಇ) ಸಣ್ಣ ಕೈಗಾರಿಕೆಯ ಸಹಾಯಧನ ಬಿಡುಗಡೆಗೊಳಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸಹಾಯಧನ ತೀವ್ರಗತಿಯಲ್ಲಿ ಬಿಡುಗಡೆಗೊಳಿಸಿ ಸಣ್ಣ ಕೈಗಾರಿಕೆ ಉದ್ಯಮಗಳ ಪುನಶ್ಚೇತನಕ್ಕೆ ಅನುವು ಮಾಡಲು ಸರಕಾರ ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) ಈಗಾಗಲೇ ರಾಜ್ಯದ 6 ಸ್ಥಳಗಳಲ್ಲಿ ಅಂದರೆ ಮಾಲೂರು, ಮದ್ದೂರು, ಹಿರಿಯೂರು, ಬಾಗಲ ಕೋಟೆ, ಬೆಳಗಾವಿ ಹಾಗೂ ಜೇವರ್ಗಿಯಲ್ಲಿ ಆಗ್ರೋ ಪಾರ್ಕ್ ಸ್ಥಾಪನೆಗೆ ಅನುಮೋದನೆ ನೀಡಲಾಗಿದ್ದು ಇವುಗಳು ಕಾರ್ಯರೂಪಕ್ಕೆ ಬರುವ ವಿವಿಧ ಹಂತದಲ್ಲಿದೆ. ಹಾವೇರಿ ಸೇರಿದಂತೆ, ಹೆಚ್ಚುವರಿ ಸ್ಥಳಗಳಲ್ಲಿ ಪಾರ್ಕ್‌ಗಳ ಸ್ಥಾಪನೆ ಕುರಿತ ಸಾಧ್ಯತೆಗಳನ್ನು ಸರ್ಕಾರವು ಪ್ರೋತ್ಸಾಹಿಸುತ್ತದೆ.

ಇ) ಬಂದಿದೆ.

ಈ) ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 271 ಘಟಕಗಳಿಗೆ ರೂ.2,41,99,975/- ಸಹಾಯಧನ ಬಿಡುಗಡೆ ಮಾಡಬೇಕಾಗಿದೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ಆಯವ್ಯಯ ಹಾಗೂ ಮುಂಬರುವ ಸಾಲಿನ ಆಯವ್ಯಯ ಹಂಚಿಕೆಯ ಮುಖಾಂತರ ಸದರಿ ಪಾರ್ಕ್‌ನ್ನು ಅದಷ್ಟು ಶೀಘ್ರವಾಗಿ ಬಿಡುಗಡೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

183(367) ಶ್ರೀ ಶ್ರೀರಾಮರೆಡ್ಡಿ ಜಿ.ವಿ (ಬಾಗೇಪಲ್ಲಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಅರಣ್ಯ ಪ್ರದೇಶ ಕ್ರಮೇಣ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದ ಬಯಲುಸೀಮೆ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಹೌದು.

ಇ) ರಾಜ್ಯದ ಬಯಲುಸೀಮೆ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ ಪಡಿಸಲು ಸರ್ಕಾರವು ಜಪಾನ್ ಅಂತರಾಷ್ಟ್ರೀಯ ಸಹಕಾರ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ 1997-98ನೇ ಸಾಲಿನಿಂದ 2004-05ನೇ ಸಾಲಿನವರೆಗೆ ರೂ.722.489 ಕೋಟಿಗಳ ಆರ್ಥಿಕ ಗುರಿಯೊಂದಿಗೆ ಕರ್ನಾಟಕ ಪೂರ್ವಪ್ರಸ್ಥ